ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,
ಕುಮಟಾ.

ಸಿಸಿ ನಂ. 120/2022

| | | |
|---|---|---|
| ಹೆಸರು | – | ಈಶ್ವರ |
| ತಂದೆಯ ಹೆಸರು | – | ರಾಮಾ ಅಂಬಿಗ |
| ವಯಸ್ಸು | – | 43 ವರ್ಷ |
| ಉದ್ಯೋಗ | – | ಮೀನುಗಾರಿಕೆ |
| ವಾಸ್ತವ್ಯ | – | ಬೇಲೇಹಿತ್ತಲ, ದಂಡೇಬಾಗ, ಗೋಕರ್ಣ |

– ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೆಚ್ಚುವರಿ ಹೇಳಿಕೆ –

ಪ್ರಶ್ನೆ – 1 ಈ ಪ್ರಕರಣದಲ್ಲಿನ ಸಾಕ್ಷಿದಾರರ ಹೇಳಿಕೆಯನ್ನು ಓದಿ, ಹೇಳಿ, ಕೇಳಿ, ತಿಳಿದು ಕೊಂಡಿದ್ದೀರಾ?

ಉತ್ತರ –

**ಪ್ರಶ್ನೆ – 2** ಪಿ ಡಬ್ಲ್ಯೂ 2 – ಶ್ರೀ ಮಂಜುನಾಥ ಗಣಪತಿ ತಾಂಡೇಲ ಇವರು ತಮ್ಮ ಸಾಕ್ಷ್ಯದಲ್ಲಿ , ನೀವು ಕುಮಟಾ ತಾಲೂಕು ಬೇಲೇಹಿತ್ತಲ ಮಜರೆಯ ನಿವಾಸಿಯಾಗಿದ್ದು , ಮೀನುಗಾರಿಕಾ ವ್ಯವಹಾರವನ್ನು ಮಾಡಿಕೊಂಡಿದ್ದು , ಅವರು ಸಹ ಮೀನುಗಾರಿಕಾ ವ್ಯವಹಾರರವನ್ನು ಮಾಡುತ್ತಿದ್ದು , ಅವರಿಗೆ ಗೋವಾ ರಾಜ್ಯದ ದೊಡ್ಡ ದೊಡ್ಡ ಪರ್ಶಿನ್ ಬೋಟುಗಳ ಮಾಲಕರ ಪರಿಚಯ ಹಾಗೂ ಸಂಪರ್ಕ ಇದ್ದು , ಸದ್ರಿ ಬೋಟುಗಳ ಮಾಲಕರಿಗೆ ಅವರು ಅವರ ಬೋಟುಗಳಿಗೆ ಅಗತ್ಯ ನುರಿತ ಸಿಬ್ಬಂದಿಗಳು /ಕಲಾಸಿಗಳನ್ನು ಪೂರೈಸುವ ಮಧ್ಯಸ್ಥಿಕಾ ವ್ಯವಹಾರವನ್ನು ಮಾಡಿಕೊಂಡು ಬಂದಿರುತ್ತೇನೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 3** ಪಿಡಬ್ಲ್ಯೂ 2 – ಇವರು ಮುಂದುವರಿದು, ಹೀಗಿರುತ್ತ ನೀವು ಹಾಗೂ ನಿಮ್ಮ ಪರಿಚಯಸ್ಥರು ಮತ್ತು ಆಪ್ತರೂ ಆದ ರವೇಶ ಶಂಕರ ಅಂಬಿಗ , ಸಾಃ ನುಕ್ಕೇರಿ , ತಾಃ ಕುಮಟಾ , ಚಂದ್ರಕಾಂತ ಕುಸ್ಲು ಹರಿಕಂತ್ರ, ಸಾಃ ಬಿಳಿಹೊಂಯ್ಗಿ, ತಾಃ ಅಂಕೋಲಾ ಮತ್ತು ದಿನೇಶ ಅಂಬಿಗ, ಸಾಃ ದಿವಗಿ, ತಾಃ ಕುಮಟಾ ಇವರುಗಳ ಸಮೇತವಾಗಿ ಅವರ ಪರಿಚಯಸ್ಥ ಗೋವಾ ರಾಜ್ಯದ ಪರ್ಶಿನ ಬೋಟಿಯ ಮಾಲಕರಾದ ಶ್ರೀಮತಿ ರೀನಾ ಡೊಮಿಂಗೋ ರೋಡ್ರಿಗ್ಸ್ ಮತ್ತು ಶ್ರೀ ಡೊಮಿಂಗೋ ರೋಡ್ರಿಗ್ಸ್ ಇಬ್ಬರೂ ಸಾಃ ಮಡಗಾಂವ ಇವರ ಮೀನುಗಾರಿಕಾ ದೋಣಿಯಲ್ಲಿ ಕೆಲಸ ಮಾಡವುದಾಗಿ ಒಪ್ಪಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 4** ಪಿಡಬ್ಲ್ಯೂ 2 – ಇವರು ಮುಂದುವರಿದು, ಆ ಪ್ರಕಾರ ಮಾತುಕತೆಯಾಡಿ, ಜುಲೈ 2018 ರಲ್ಲಿ ಪ್ರತ್ ಪ್ರತ್ಯೇಕ ಕರಾರು ಪತರಗಳನ್ನೂ ಸಹ ಮಾಡಿಕೊಂಡು ನೀವು ಮತ್ತು ಇತರ ಮೂರು ಜನ ತಲಾ ರೂ. 2,00,000/– ರಂತೆ ಒಟ್ಟೂ ರೂ. 8,00,000/– ವನ್ನು ಮೇಲ್ಕಾಣಿಸಿದ ಪರ್ಶಿನ ಬೋಟಿಯ ಮಾಲಕರಾದ ಶ್ರೀಮತಿ ರೀನಾ ಡೊಮಿಂಗೋ ರೋಡ್ರಿಗ್ಸ್ ಮತ್ತು ಶ್ರೀ ಡೊಮಿಂಗೋ ರೋಡ್ರಿಗ್ಸ್ , ಇವರಿಂದ ಅವರ ಮೂಲಕ ಪಡೆದುಕೊಂಡಿದ್ದು ಇರುತ್ತದೆ ಎಂದು ಹೇಳಿರುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 5** ಪಿಡಬ್ಲ್ಯೂ 2 – ಇವರು ಮುಂದುವರಿದು, ಆದರೆ ನೀವು ಹಾಗೂ ನಿಮ್ಮ ಜೊತೆಗಾರರಾದ ರಮೇಶ ಶಂಕರ ಅಂಬಿಗ, ಚಂದ್ರಕಾಂತ ಕುಸ್ಲು ಹರಿಕಂತ್ರ ಮತ್ತು ದಿನೇಶ ಅಂಬಿಗ ಇವರುಗಳು ತಾವು ಕರಾರು ಪತ್ರದಲ್ಲಿ ಬರೆದು ಆಶ್ವಾಸನೆಯನ್ನು ನೀಡಿದಂತೆ ಮೇಲ್ಕಾಣಿಸಿದ ಬೋಟುಗಳ ಮಾಲಕರಲ್ಲಿಗೆ ಅವರ ಬೋಟುಗಳ ಕಲಾಸಿ ಕೆಲಸಕ್ಕೆ ಹಾಜರಾದದ್ದಾಗಲೀ ಅಥವಾ ತಾವು ಮುಂಗಡವಾಗಿ ಅವರಿಂದ ಪಡೆದುಕೂಡ ತಲಾ ರೂ . 2,00,000/– ಒಟ್ಟೂ ರೂ. 8,00,000/–ವನ್ನು ಮರಳಿಸಿದ್ದಾಗಲೀ ಇರುವುದಿಲ್ಲ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 6** ಪಿಡಬ್ಲ್ಯೂ 2 – ಇವರು ಮುಂದುವರಿದು, ಈ ಕುರಿತು ಅವರು ನಿಮ್ಮನ್ನು ಸಂಪರ್ಕಿಸಿ ವಿಚಾರಿಸಿದಾಗಲೆಲ್ಲ ನೀವು ಮೇಲ್ಕಾಣಿಸಿದ ಬೋಟುಗಳ ಮಾಲಕರ ಬೋಟುಗಳಿಗೆ ಕಲಾಸಿ ಕೆಲಸಕ್ಕೆ ಹೋದದ್ದೂ ಇರುವುದಿಲ್ಲ ಅಥವಾ ನೀವು ಪಡೆದುಕೊಂಡಂತಹ ಮುಂಗಡ ಹಣವನ್ನು ಮರಳಿಸಿದ್ದೂ ಇರುವುದಿಲ್ಲ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 7** ಪಿಡಬ್ಲ್ಯೂ 2 – ಇವರು ಮುಂದುವರಿದು, ಇದರಿಂದಾಗಿ ಅವರಿಗೆ ಮೇಲ್ಕಾಣಿಸಿದ ಬೋಟುಗಳ ಮಾಲಕರಿಂದ ಸಂದಾಯವಾಗತಕ್ಕ ಸುಮಾರು ರೂ. 12,00,000/- ವನ್ನು ಅವರು ತಡೆಹಿದಿರುತ್ತಾರೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ- 8** ಪಿಡಬ್ಲ್ಯೂ 2 – ಇವರು ಮುಂದುವರಿದು, ಅಲ್ಲದೇ ಮೇಲ್ಕಾಣಿಸಿದ ಪರ್ಶಿನ್ ಬೋಟುಗಳ ಮಾಲಕರು ಅವರ ಹಿತವಾಗಿ ನಿಮ್ಮ ವಿರುದ್ಧ ಗೋವಾ ರಾಜ್ಯದ ನ್ಯಾಯಾಲಯದಲ್ಲಿ ಸದ್ರಿ ಮುಂಗಡ ಹಣದ ವಸೂಲಾತಿಗಾಗಿ ಸೂಕ್ತ ಕಾನೂನು ಕ್ರಮ ತಗೆದುಕೊಳ್ಳುವುದಾಗಿ ಅವರಿಗೆ ಎಚ್ಚರಿಕೆಯನ್ನು ನೀಡಿರುತ್ತಾರೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ – 9** ಪಿ ಡಬ್ಲ್ಯೂ 2 – ರವರು ಮುಂದುವರೆದು , ನಂತರದಲ್ಲಿ ಅವರು ನಿಮ್ಮನ್ನು ಜೂನ್ 2, 2019 ರಂದು ಭೇಟಿಯಾಗಿ ಎಲ್ಲಾ ವಿಷಯವನ್ನು ತಿಳಿಸಿದಾಗ , ನೀವು ಅವರನ್ನು ದಿಃ 15-06-2019 ರಂದು ಪುನಃ ಭೇಟಿಯಾಗಿ ಮೇಲಿನಂತೆ ನೀವು ಹಾಗೂ ಇತರ

ಮೂವರು ಪಡೆದುಕೊಂಡಂತಹ ಮುಂಗಡ ಹಣ ರೂ. 8,00,000/– ಹಾಗೂ ಅವರು ಅನುಭವಿಸಿದ ಬರಪಾಯಿ ಹಣವಂತಾ ರೂ . 1,00,000/– ವನ್ನು ಸೇರಿಸಿ ಒಟ್ಟೂ ರೂ. 9,00,000/– ಕ್ಕೆ ನೀವು ನಿಮ್ಮ ಸ್ವಂತ ಜವಾಬ್ದಾರಿಯಿಂದ ತನ್ನ ಬಾಬ್ತು ಖಾತೆ ನಂ 03062200060030 ಇರುವ ಸಿಂಡಿಕೇಟ್ ಬ್ಯಾಂಕ್ , ಶಾಖೆ ಗೋಕರ್ಣ ಇದರ ಚೆಕ್ ನಂ. 005783 ದಿಃ 17–06–2019 ನೇದನ್ನು ನೀಡಿ, ಸದ್ರಿ ಚೆಕ್ ನ್ನು ಗದೀಕರಿಸಿ ಕೊಂಡು ಹಣ ಪಡೆಯಬೇಕೆಂತಾ ತಿಳಿಸಿ ನೀಡಿದ್ದು ಇರುತ್ತದೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ– 10</u>** ಪಿಡಬ್ಲ್ಯೂ 2 – ಇವರು ಮುಂದುವರಿದು, ನಿಮ್ಮ ಮಾತನ್ನು ನಂಬಿ ಅವರು ಸದರ ಚೆಕ್ ನ್ನು ಅವರ ಬಾಬ್ತು ಖಾತೆ ಇರುವ ಸಿಂಡಿಕೇಟ್ ಬ್ಯಾಂಕ್ , ಶಾಖೆ ಬಂಕಿಕೋಡ್ಲ ಇದರ ಮುಖಾತಂರ ನಗದಿಕರಣಕ್ಕೆ ಹಾಕಿದಾಗ ಸದ್ರಿ ಚೆಕ್ ನಗದೀಕರಣಗೊಳ್ಳದೇ ಸಿಂಡಿಕೇಟ್ ಬ್ಯಾಂಕ್ , ಶಾಖೆ ಬಂಕಿಕೋಡ್ಲ ಇದರ ದಿಃ 18–06–2019 ರ ಮೆಮೋದೊಂದಿಗೆ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿರುವುದಿಲ್ಲ "Funds Insufficient' ಎಂಬ ಹಿಂಬರಹದೊಂದಿಗೆ ನಿಮ್ಮ ಚೆಕ್ ನ್ನು ನಗದೀಕರಿಸದೇ ವಾಪಸು ಮಾಡಿರುತ್ತಾರೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ– 11</u>** ಪಿಡಬ್ಲ್ಯೂ 2 – ಇವರು ಮುಂದುವರಿದು, ತಿಳಿದೂ ತಿಳಿದು ನೀವು ನಿಮ್ಮ ಖಾತೆಯಲ್ಲಿ ಚೆಕ್ ನಗಕರಸುವಷ್ಟು ಹಣವಿಡದೇ ಮೋಸ ವ ವಂಚನೆ ಮಾಡುವ ಇರಾದೆಯಿಂದ ಬೋಗಸ್ ಚೆಕ್ ನ್ನು ಕೊಟ್ಟು ನೆಗೋಶಿಯೇಬಲ್ ಇನ್ಸುಮೆಂಟ್ ಕಾಯ್ದೆಯಡಿ ಅಪಾದ ಮಾಡಿರುತ್ತೀರಿ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**ಪ್ರಶ್ನೆ– 12** ಪಿಡಬ್ಲ್ಯೂ 2 – ಇವರು ಮುಂದುವರಿದು, ನಂತರದಲ್ಲಿ ನಿಮಗೆ ದಿಃ 19–06–2019 ರ ಒಂದು ರಜಿಸ್ಟರ್ಡ ವಕೀಲಿ ನೋಟಿಸನ್ನು ಕಳಿಸಿ , ಇನ್ನು ಹದಿನೈದು ದಿನಗಳೊಳಗೆ ಚೆಕ್ ಹಣವನುನ ಪಾವತಿಸಬೇಕೆಂದು ಕೇಳಲಾಯಿತು ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ– 13** ಪಿಡಬ್ಲ್ಯೂ 2 – ಇವರು ಮುಂದುವರಿದು, ಆದರೆ ಸದ್ರಿ ರಜಿಸ್ಟರ್ಡ ನೋಟಿಸು ನಿಮಗೆ ಜಾರಿಯಾದ ಬಗ್ಗೆ ಅಂಚೆ ಇಲಾಖೆಯಿಂದ ಸ್ವೀಕೃತ ಪತ್ರ ಬರದೇ ಇದ್ದ ಕಾರಣ , ಅಂಚೆ ಇಲಾಖೆಯವರಿಗೆ ಈ ಕುರಿತು ದಿಃ 01–08–2019 ರ ಪತ್ರದಲ್ಲಿ ಕೇಳಿದಾಗ, ಅಂಚೆ ಇಲಾಖೆಯವರು ತಮ್ಮ " Item Delivery Confirmed" ಪತ್ರದಲ್ಲಿ ಸದ್ರಿ ರಜಿಸ್ಟರ್ಡ ನೋಟಿಸನ್ನು ನಿಮಗೆ ದಿಃ 21–06–2019 ರಯಿ ಜಾರಿಯಾದ ಬಗ್ಗೆ ತಿಳಿಸಿರುತ್ತಾರೆ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ– 14** ಪಿಡಬ್ಲ್ಯೂ 2 – ಇವರು ಮುಂದುವರಿದು, ಆದರೆ ನೀವು ಸದ್ರಿ ರಜಿಸ್ಟರ್ಡ ನೋಟಿಸಿಗೆ ಉತ್ತರಿಸಿದ್ದಾಗಲೀ ಅಥವಾ ನಿಗದಿತ ಅವಧಿಯೊಳಗೆ ಚೆಕ್ ಹಣವನ್ನು ಅವರಿಗೆ ಪಾವತಿಸಿದ್ದಾಗಲೀ ಇರುವುದಿಲ್ಲ ಎಂದು ಹೇಳುತ್ತಾರೆ ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ – 15** ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರ –

**ಪ್ರಶ್ನೆ – 16** ನಿಮ್ಮ ಪರ ರಕ್ಷಣಾ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಉತ್ತರ –

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ
ದಿಃ 26-02-2026.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ